**CC No. 92/2018**
**ಪಿ ಡಬ್ಲ್ಯೂ : 2**

**ದಿನಾಂಕ 26-05-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟಿ ಸವಾಲು ಆರೋಪಿ ಪರ ವಕೀಲರು ಶ್ರೀ ಜಿ. ಬಿ. ಎನ್. ಇವರಿಂದ</u>**

ಚಾಸಾಃ 1 ರವರು ನನಗೆ ಖಾಸಾ ಅಕ್ಕನಾಗಬೇಕು ಎಂದರೆ ಸರಿ. ಚಾಸಾಃ 2 ರವರು ನನಗೆ ದೊಡ್ಡಪ್ಪನಾಗಬೇಕು, ಚಾಸಾಃ 3 ರವರು ನಮ್ಮ ತಾಂಡಾದವರು ಇರುತ್ತಾರೆ. ಚಾಸಾಃ 5 ರವರು ನನ್ನ ದೊಡ್ಡಪ್ಪನ ಮಗ ಎಂದರೆ ಸರಿ. ಚಾಸಾಃ 6 ರವರು ನಮ್ಮ ತಾಂಡಾದವರು ಇರುತ್ತಾರೆ. ನನ್ನ ಮತ್ತು ಚಾಸಾಃ 3 ರವರ ಮನೆಯ ನಡುವೆ 50 ಫೀಟ್ ಅಂತರವಿದೆ. ನನ್ನ ಮತ್ತು ಚಾಸಾಃ 5 ರವರ ಮನೆ ಹತ್ತಿಕೊಂಡು ಇದೆ. ನನ್ನ ಮತ್ತು ಚಾಸಾಃ 6 ರವರ ಮನೆ 200 ಫೀಟ್ ಅಂತರದಲ್ಲಿದೆ. ಚಾಸಾಃ 1 ರವರ ಮದುವೆ ಆಗಿರುವುದಿಲ್ಲ ಎಂದರೆ ಸರಿ. ನನ್ನ ಅಕ್ಕ ಮತ್ತು ಹೆಂಡತಿ ಕೋರ್ಟ ಆವರಣದ ಹೊರಗಡೆ ಟಿ ಸ್ಟಾಲ್ ಇರುತ್ತದೆ ಎಂದರೆ ಸಾಕ್ಷಿಯು ಚಾಸಾಃ 1 ರವರು ಮಾತ್ರ ಇರುತ್ತಾರೆ ನನ್ನ ಹೆಂಡತಿ ಮನೆಯಲ್ಲಿ ಇರುತ್ತಾರೆ. ನನ್ನ ಹೆಂಡತಿ ಚಾಸಾಃ 1 ರವರ ಜೊತೆಗೆ ದಿನಾಲೂ ಟಿ ಸ್ಟಾಲ್ ಗೆ ಬಂದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನೆಯಾದ ದಿನದಂದು ಮನೆಯಲ್ಲಿದ್ದೆ. ಘಟನೆಯಾದ ದಿನ ನಾನು ಮತ್ತು ಚಾಸಾಃ 1 ರವರು ಇದ್ದೇವು. ಸದರಿ ನನ್ನ ಮದುವೆಯಾಗಿ ಒಂದು ವರ್ಷವಾಗಿರುತ್ತದೆ. ನನ್ನ ಮನೆಯಲ್ಲಿ ಮೂರು ಕೋಣೆಗಳು ಇವೆ. ಆರೋಪಿತನು ಮುಂಜಾನೆ 7-00 ಗಂಟೆ ಸುಮಾರಿಗೆ ನಮ್ಮ ಮನೆಗೆ ಬಂದಿರುತ್ತಾನೆ. ನನ್ನ ಮತ್ತು ಆರೋಪಿತನ ಮನೆಯ ನಡುವೆ 400 ರಿಂದ 500 ಫೀಟ್ ದೂರದಲ್ಲಿದೆ. ಸೇವಾಲಾಲ ಮತ್ತು ಮರೆಮ್ಮ ದೇವಸ್ಥಾನ ನಮ್ಮ ಮನೆಯ ಹಿಂದೆ ಇದೆ. ಸದರಿ ದೇವಸ್ಥಾನಗಳಿಗೆ ಮುಂಜಾನೆ 7-00 ಗಂಟೆ ಸುಮಾರಿಗೆ ಜನರು ಪೂಜೆಗೆ ಬರುತ್ತಾರೆ ಎಂದರೆ ಸಾಕ್ಷಿಯು ಆ ದಿನ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ಮನೆಯ ಮುಂದೆ ಬಂದಾಗ ನಾನು ಮತ್ತು ಚಾಸಾಃ 1 ರವರು ಮನೆಯ ಹೊರಗಡೆ ಇದ್ದೇವು. ಆರೋಪಿತನ ಜೊತೆ ಯಾರು ಬಂದಿದ್ದರು ಎಂದರೆ ಸಾಕ್ಷಿಯು ಅವನು ಒಬ್ಬನೇ ಬಂದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ನಾವು ಮನೆಯ ಹೊರಗಡೆ ಇದ್ದಾಗ ಆರೋಪಿತನು ಬಂದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನ ಕೈಯಲ್ಲಿ ಕೊಡಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನ ಹೆಂಡತಿಯ ಜೊತೆ ನಾನು ಸಲುಗೆಯಿಂದ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ

ಆರೋಪಿತನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡದೇ ಇರುವುದನ್ನು ನಾನು ಪೋಲಿಸರ ಮುಂದೆ ಹೇಳಿರುತ್ತೇನೆ. ಸದರಿ ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತನ ಹೆಂಡತಿಯ ಜೊತೆ ಸಲುಗೆಯಿಂದ ಮಾತನಾಡುತ್ತಿದ್ದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ಕೊಡಲಿಯಿಂದ ಬಾಗಿಲಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗಿಲು ಹೊಡೆದಿದ್ದರ ಬಗ್ಗೆ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಬಾಗಿಲು ಹೊಡೆದಿರುವ ಬಗ್ಗೆ ನಾನು ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಾಗಿಲು ಹೊಡೆದಿರುವುದಿಲ್ಲ ಆದ್ದರಿಂದ ಪೋಲಿಸರು ಪಂಚನಾಮೆಯನ್ನು ಮಾಡಿರುವುದಿಲ್ಲ, ಎಂದರೆ ಸಾಕ್ಷಿಯು ಬಾಗಿಲು ಹೊಡೆದಿರುತ್ತದೆ ಪೋಲಿಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪೋಲಿಸರು ಬಾಗಿಲ ಬಗ್ಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ನನಗೆ ಇದೆ. ಪೋಲಿಸರು ಪಂಚನಾಮೆಯನ್ನು ಜರುಗಿಸುವಾಗ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಿನಾಂಕಃ 19-10-2017 ರಂದು 9-00 ಗಂಟೆ ಸುಮಾರಿಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ 9-00 ಗಂಟೆಗೆ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸ ಠಾಣೆಗೆ ನಾನು ಮತ್ತು ಚಾಸಾಃ 1 ಮತ್ತು ನನ್ನ ಕಾಕನಾದ ಪುಣ್ಯ ತಂದೆ ಪೂಮು ಮತ್ತು ವೆಂಕಟೇಶ ತಂದೆ ರೇವು ಹೋಗಿರುತ್ತೇವೆ ಸದರಿ ನನ್ನ ಕಾಕಂದಿರು ಮರಣ ಹೊಂದಿರುತ್ತಾರೆ.

ದಿನಾಂಕಃ 19-10-2017 ರಂದು ನಮ್ಮ ಮನೆಯ ಮುಂದೆ ಆರೋಪಿತನು ಬಂದು ಜಗಳ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೊಡಲಿ ಎಲ್ಲಾ ಮನೆಯಲ್ಲಿಯೂ ಸಿಗುತ್ತದೆ ಎಂದರೆ ಸಾಕ್ಷಿಯು ಅದೇ ಮು. ಮಾ. 1 ರಿಂದ ಹೊಡೆದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಕೊಡಲಿ ಬಜಾರದಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ಸದರಿ ಕೊಡಲಿ ರೈತರ ಮನೆಯಲ್ಲಿ ಮತ್ತು ಬಜಾರದಲ್ಲಿ ಸಿಗುತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಇದೇ ಕೊಡಲಿಯಿಂದ ಹೊಡೆದಿರುತ್ತಾನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಆರೋಪಿತನು ಮನೆಯ ಮುಂದೆ ಬಂದ ನಂತರ ನಾವು ಮನೆಯ ಒಳಗಡೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಕೊಡಲಿಯಿಂದ ಬಾಗಿಲನ್ನು ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗಿಲು ಹೊಡೆದ

ಪರಿಣಾಮವಾಗಿ ನಮಗೆ 10,000/- ರೂಪಾಯಿಗಳು ನಷ್ಟವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಕೈಯಿಂದ ಕಪಾಳಕ್ಕೆ ಹೊಡೆದ ಮತ್ತು ಕಾಲಿನಿಂದ ಒದ್ದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ನನಗೆ ಹೊಡೆದ ನಂತರ ಪೆಟ್ಟಾಗಿರುತ್ತದೆ. ಸದರಿ ನನಗೆ ಪೆಟ್ಟಾದ ನಂತರ ನನಗೆ ಗಾಯವಾಗಿರುತ್ತದೆ ಆದ್ದರಿಂದ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ನಾನು ನಮ್ಮ ಊರಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಸದರಿ ಮುದ್ನಾಳ ತಾಂಡಾದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ ತೋರಿಸಲು ಪ್ರಯತ್ನಪಟ್ಟಿದ್ದೀರಾ? ಎಂದರೆ ಸಾಕ್ಷಿಯು ಆವಾಗ ಸರಕಾರಿ ಆಸ್ಪತ್ರೆಯು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಮುದ್ನಾಳದಲ್ಲಿ ಆರೋಗ್ಯ ಪ್ರಾಥಮಿಕ ದವಾಖಾನೆ ಇದೆ ಎಂದರೆ ಸರಿ. ಸದರಿ ದವಾಖಾನೆಗೆ ನಾವು ಹೋಗಿರುವುದಿಲ್ಲ. ನಾನು ಖಾಸಗಿ ಆಸ್ಪತ್ರೆಗೆ ಹೋಗಿರುತ್ತೇನೆ.

ಸದರಿ ನನಗೆ ಹೊಡೆದಿರುವ ಬಗ್ಗೆ ಪೋಲಿಸರಿಗೆ ಹೇಳಿರುತ್ತೇನೆ. ಆದರೆ ಗಾಯವಾದ ಬಗ್ಗೆ ಪೋಲಿಸರಿಗೆ ತೋರಿಸಿರುವುದಿಲ್ಲ. ಸದರಿ ಈ ವಿಷಯ ಪೋಲಿಸರಿಗೆ ಹೇಳಿದ್ದರೆ ಅವರು ಸರಕಾರಿ ಆಸ್ಪತ್ರೆಗೆ ತೋರಿಸಲು ಪ್ರಯತ್ನ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾನು ಖಾಸಗಿ ಆಸ್ಪತ್ರೆಗೆ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಡಾಃ ಚನ್ನಗೌಡ ಮುದ್ನಾಳ ಅವರಿಗೆ ತೋರಿಸಿರುತ್ತೇನೆ. ನಾನು ಡಾಕ್ಟರಗೆ ಪೋಲಿಸ ಠಾಣೆಗೆ ಹೋಗಿ ಬಂದ ವಿಷಯವನ್ನು ತಿಳಿಸಿ ಅವರಿಂದ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಖಾಸಗಿ ಆಸ್ಪತ್ರೆಯವರು ಸರಕಾರಿ ಆಸ್ಪತ್ರೆಗೆ ಹೋಗಲು ನಿರ್ದೇಶನ ನೀಡುತ್ತಾರೆ ಎಂದರೆ ಸಾಕ್ಷಿಯು ಡಾಕ್ಟರವರು ಒಂದು ಗೋಲಿ ಮತ್ತು ಟುಬೂ ಕೊಟ್ಟು ಕಳುಹಿಸಿರುತ್ತಾರೆ. ಸದರಿ ವಿಷಯವನ್ನು ಪೋಲಿಸ ಠಾಣೆಯಲ್ಲಿ ಹೇಳಿರುತ್ತೀರಾ? ಎಂದರೆ ಸಾಕ್ಷಿಯು ನಾನು ಮೊದಲು ಪೋಲಿಸ ಠಾಣೆಗೆ ಹೋದ ನಂತರ ಡಾಕ್ಟರ ಬಳಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಡಾಃ ಮುದ್ನಾಳ ಇವರಿಗೆ ತೋರಿಸಿದ ನಂತರ ಬೇರೆ ಡಾಕ್ಟರಗೆ ತೋರಿಸಿರುತ್ತೀರಾ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಆರೋಪಿತನು ನನಗೆ ಹೊಡೆಯದೇ ಇದ್ದರೂ ಕೂಡ ನಾನು ಸೃಷ್ಟಿ ಮಾಡಿ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಪೆಟ್ಟಾಗಿದ್ದರೆ ಪೋಲಿಸರು ಸರಕಾರಿ ಆಸ್ಪತ್ರೆಗೆ ಕಳುಹಿಸುತ್ತಿದ್ದರು ಎಂದರೆ ಸಾಕ್ಷಿಯು ನಾವೇ ಹೋಗುತ್ತೇವೆ ಎಂದು ನುಡಿಯುತ್ತಾರೆ. ಚಾಸಾಃ 1 ರವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತನು ಚಾಸಾಃ 1 ರವರ ಲಂಗ, ದುಪ್ಪಟ್ಟ ಹಿಡಿದು ಮಾನಭಂಗ ಮಾಡಲು ಪ್ರಯತ್ನ ಮಾಡಿರುತ್ತಾನೆ ಎಂದು ನಾನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 5 ಮತ್ತು

ಚಾಸಾಃ 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನಮಗೆ ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನ ಹೆಂಡತಿಯ ಜೊತೆ ನಾನು ಸಲುಗೆಯಿಂದ ಮತ್ತು ಚುಡಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿತನು ಮತ್ತು ನನ್ನ ನಡುವೆ ನ್ಯಾಯ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ವೆಂಕಟರೆಡ್ಡಿ ಗೌಡರ ಮುಂದೆ ನ್ಯಾಯ ಪಂಚಾಯಿತಿ ಮಾಡಿರುತ್ತೇವೆ. ಸದರಿ ವೆಂಕಟರೆಡ್ಡಿ ಇವರು ನನಗೆ ಆರೋಪಿತನ ಹೆಂಡತಿಗೆ ಚುಡಾಯಿಸಬಾರದು ಎಂದು ಹೇಳಿ ನನಗೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವೆಂಕಟರೆಡ್ಡಿ ಇವರು ನನಗೆ ಮತ್ತೊಂದು ಸಲ ಆರೋಪಿತನು ಸಿಟ್ಟಿನಿಂದ ನೋಡಿದರೆ ದೂರನ್ನು ಸಲ್ಲಿಸಲು ಹೇಳಿರುತ್ತಾರೆ. ಸದರಿ ನಾನು ಆರೋಪಿತನ ಹೆಂಡತಿಯ ಗಾಡಿಗೆ ಹಿಂಬಾಲಿಸುತ್ತಿದ್ದರೂ ಕೂಡ ಆರೋಪಿತನು ನಮಗೆ ಹಿನಬಾಲಿಸುತ್ತಿದ್ದ, ಚುಡಾಯಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನಿಗೆ ಮತ್ತು ನನ್ನ ನಡುವೆ ವೈಶಮ್ಯತೆ ಇರುವುದರಿಂದ ನಾನೇ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**